ಕರ್ನಾಟಕ ಸರ್ಕಾರ

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು –03**

E-Mail Id: adpisvsection@gmail.com

ಸಂ:ಎಸ್1/ವಾ.ಪ./ಫ.ಉ.ಪ/32/2023–24 ದಿನಾಂಕ:26.10.2023

**ಸುತ್ತೋಲೆ**

**ವಿಷಯ:** ವಾಣಿಜ್ಯ ಪರೀಕ್ಷೆಯ ಫಲಿತಾಂಶ ಉತ್ತಮಪಡಿಸಿಕೊಳ್ಳುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜುಲೈ–2023ರ ಮಾಹೆಯಲ್ಲಿ ನಡೆದ ವಾಣಿಜ್ಯ ಪರೀಕ್ಷೆಯ ಫಲಿತಾಂಶವನ್ನು ಈಗಾಗಲೇ ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಇಚ್ಛಿಸುವ ಅಭ್ಯರ್ಥಿಗಳು ದಿನಾಂಕ: 15.11.2023 ರೊಳಗೆ ಸಂಬಂಧಿಸಿದ ವಾಣಿಜ್ಯ ಸಂಸ್ಥೆಯ ಮುಖಾಂತರ ಅರ್ಜಿ ಸಲ್ಲಿಸುವುದು. ಉತ್ತೀರ್ಣರಾದ ಎರಡು ವರ್ಷದೊಳಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಅಂದರೆ ಜನವರಿ–2022 ಮತ್ತು ನಂತರದ ವಾಣಿಜ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅರ್ಜಿ ಸಲ್ಲಿಸಬಹುದಾಗಿದೆ.

- ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಈ ಮುಂಚೆ ಹಾಜರಾಗಿದ್ದ ವಾಣಿಜ್ಯ ಸಂಸ್ಥೆಯಿಂದಲೇ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅರ್ಜಿ ಸಲ್ಲಿಸುವುದು.
- ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಬಯಸುವ ಅಭ್ಯರ್ಥಿಗಳು ಮೂಲ ಅಂಕಪಟ್ಟಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
- ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ನಿಗದಿಪಡಿಸಿದ ಶುಲ್ಕ ರೂ.100–00 ( ಒಂದು ನೂರು ರೂಪಾಯಿಗಳು) ಗಳನ್ನು ಇತರೆ ಪರೀಕ್ಷೆಗಳ ವಿಭಾಗಕ್ಕೆ ಖಾತೆ ಸಂಖ್ಯೆ: 1261000109019723 IFSC CODE: PUNB0126100 ಈ ಖಾತೆಗೆ ಪಾವತಿಸಿದ ನೆಫ್ಟ್ ಚಲನ್ ಸಲ್ಲಿಸುವುದು.
- ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಸಂಬಂಧ ಈಗಾಗಲೇ ಅರ್ಜಿ ಸಲ್ಲಿಸಿದ್ದು, ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಸಾಧ್ಯವಾಗದೇ ಹಿಂದಿನ ಪರೀಕ್ಷೆಗಿಂತ ಕಡಿಮೆ ಅಂಕಗಳು ಬಂದಿದ್ದಲ್ಲಿ/ಅನುತ್ತೀರ್ಣರಾಗಿದ್ದಲ್ಲಿ, ಕಡಿಮೆ ಅಂಕದ ಅಂಕಪಟ್ಟಿಯನ್ನು/ಫಲಿತಾಂಶ ಪಟ್ಟಿಯನ್ನು ಸಂಸ್ಥೆಯ ಮುಖಾಂತರ ಸಲ್ಲಿಸಿ, ಮಂಡಲಿಗೆ ಮನವಿ ಸಲ್ಲಿಸಿ, ಮೂಲ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವುದು.
- ವಾಣಿಜ್ಯ ಸಂಸ್ಥೆಯ ಮುಖ್ಯಸ್ಥರು ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಸಂಬಂಧ ಮಂಡಲಿಯಿಂದ ನೀಡಲಾದ ಅನುಮತಿ ಪತ್ರದ ಸಂಖ್ಯೆಯನ್ನು ಅಭ್ಯರ್ಥಿಯ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅರ್ಜಿ ತುಂಬುವ ಸಮಯದಲ್ಲಿ ಕಡ್ಡಾಯವಾಗಿ ಭರ್ತಿಮಾಡುವುದು.

(ಹೆಚ್.ಎನ್.ಗೋಪಾಲಕೃಷ್ಣ)
ನಿರ್ದೇಶಕರು (ಪರೀಕ್ಷೆಗಳು)

ಪ್ರತಿಯನ್ನು,

1. ವಿಭಾಗೀಯ ಮಟ್ಟದ ಎಲ್ಲಾ ಕಾರ್ಯದರ್ಶಿಗಳಿಗೆ ಹಾಗೂ ಪದನಿಮಿತ್ತ ಸಹನಿರ್ದೇಶಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ವಾಣಿಜ್ಯ ಶಾಲೆಗಳ ಪ್ರಾಚಾರ್ಯರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಶಾಖಾಧಿಕಾರಿಗಳು, ಕಂಪ್ಯೂಟರ್ ಶಾಖೆರವರಿಗೆ ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
4. ಕಚೇರಿ ಪ್ರತಿ.